ಬಿ.ಪ್ಯಾಕ್
ಅಂದದೂರು ಬೆಂಗಳೂರು

ಸಹಾಯದೊಂದಿಗೆ
CGI

# ಬಿ.ಸೇಫ್ ಕ್ಷೇತ್ರ

ಮಹಿಳೆಯರ ಸುರಕ್ಷತೆ ಮತ್ತು ಸಬಲೀಕರಣಕ್ಕಾಗಿ ಒಂದು ಉಪಕ್ರಮ



# ಬಿ-ಸೇಫ್ ಕ್ಷೇತ್ರ ಪರಿಚಯ

ನಮ್ಮ ದೇಶವು ಸಾಕಷ್ಟು ಮಾನವ ಸಂಪನ್ಮೂಲವನ್ನು ಹೊಂದಿದೆ. ಆದರೆ ಇವರಲ್ಲಿ ಸುಮಾರು ಅರ್ಧದಷ್ಟಿರುವ ಮಹಿಳೆಯರು ಅಲ್ಪ ಪ್ರಮಾಣದ ಸಹಾಯವನ್ನೋ ಅಥವಾ ಸಹಾಯದಿಂದ ವಂಚಿತರಾಗಿದ್ದಾರೆ. ಮಹಿಳಾ ಸಬಲೀಕರಣ ಸಾಧಿಸುವ ನಿಟ್ಟಿನಲ್ಲಿ ಮಹಿಳಾ ಸುರಕ್ಷತೆ ಅಗತ್ಯ ಕ್ರಮವಾಗಿದೆ. ಬಿ-ಸೇಫ್ ವಿಧಾನಸಭೆ ಕ್ಷೇತ್ರವು ವಿವಿಧ ಸರ್ಕಾರಿ ಸಂಸ್ಥೆಗಳನ್ನು, ಪ್ರಮುಖ ಪಾಲುದಾರರು ಮತ್ತು ವಿಷಯ ತಜ್ಞರಿಗೆ ಸಮಾನ ವೇದಿಕೆ ಕಲ್ಪಿಸಿ ಪರಿಶೋಧನೆ, ಜಾಗೃತಿ, ಕಾರ್ಯತಂತ್ರಗಳು ಮತ್ತು ವಕಾಲತ್ತಿನ ಮೂಲಕ ವಿಧಾನಸಭೆ ಕ್ಷೇತ್ರಗಳನ್ನು ಮಹಿಳೆಯರಿಗೆ ಮತ್ತು ಮಕ್ಕಳಿಗೆ ಸುರಕ್ಷಿತವಾಗಿಸುವ ಒಂದು ಉಪಕ್ರಮವಾಗಿದೆ.

ಈ ಕಾರ್ಯಕ್ರಮವು ಬಿ-ಸೇಫ್ ರಾಯಭಾರಿಗಳ ನೇತೃತ್ವದಲ್ಲಿ ನಡೆಯಲಿದೆ.

# ಬಿ-ಸೇಫ್ ರಾಯಭಾರಿಗಳು:

ನಾವು ತೊಡಗಿಸಿಕೊಳ್ಳುವ ಎಲ್ಲ ಸಮುದಾಯಗಳಲ್ಲೂ ಹಿಂದುಳಿದ ಮಹಿಳೆಯರನ್ನು ಸಶಕ್ತಗೊಳಿಸುವ ಆಸಕ್ತಿ ಹಾಗೂ ಉದ್ದೇಶ ಹೊಂದಿರುವ ಸಾಕಷ್ಟು ಮಹಿಳೆಯರಿದ್ದಾರೆ. ಆದರೆ ಅವರಿಗೆ ಸೂಕ್ತ ಜ್ಞಾನ, ಅವಶ್ಯಕ ಸಾಧನ ಮತ್ತು ಸಂಪನ್ಮೂಲಗಳ ಕೊರತೆ ಎದುರಾಗುತ್ತದೆ. ಬಿ-ಸೇಫ್ ಈ ರೀತಿಯ ಮಹಿಳೆಯರನ್ನು ರಾಯಭಾರಿಗಳೆಂದು ಗುರುತಿಸಿ, ತೀವ್ರತರದ ತರಬೇತಿ ಮೂಲಕ ಅವರ ಸಾಮರ್ಥ್ಯ ವೃದ್ಧಿಸುವುದು ಮತ್ತು ಪೊಲೀಸ್ ಅಧಿಕಾರಿಗಳು, ಆಪ್ತಸಮಾಲೋಚನಾ ಕೇಂದ್ರಗಳು, ಕಾನೂನು ನೆರವು, ಯೋಜನೆಗಳು, ಸಾಲಗಳು ಸೇರಿದಂತೆ ಅಗತ್ಯ ಸಂಪನ್ಮೂಲಗಳಿಗೆ ಅವಕಾಶ ಕಲ್ಪಿಸಿಕೊಡುತ್ತದೆ.
ಬಿ-ಸೇಫ್ ರಾಯಭಾರಿ ಕಾರ್ಯಕ್ರಮದ ಪ್ರಾಥಮಿಕ ಗಮನ ಕೆಳಗಿನಂತಿವೆ:

೧. ಸಾರ್ವಜನಿಕ ಸ್ಥಳಗಳಲ್ಲಿ ಮಹಿಳಾ ಸುರಕ್ಷತೆಯಲ್ಲಿರುವ ಲೋಪಗಳನ್ನು ಅರ್ಥ ಮಾಡಿಕೊಂಡು, ಸೂಕ್ತ ಕಾರ್ಯತಂತ್ರಗಳ ಮೂಲಕ ಮತಕ್ಷೇತ್ರಗಳಲ್ಲಿ ಈ ಲೋಪವನ್ನು ಸರಿಪಡಿಸುವಲ್ಲಿ ಸರ್ಕಾರ ಹಾಗೂ ಪ್ರಮುಖ ಪಾಲುದಾರರೊಂದಿಗೆ ಕೆಲಸ ಮಾಡುವುದು
೨. ಮಹಿಳಾ ಸಬಲೀಕರಣ ಸಾಧಿಸಲು ಅಗತ್ಯವಿರುವ ಸಂಪನ್ಮೂಲಗಳಿಗೆ ಅವಕಾಶ ದೊರಕಿಸಿಕೊಡುವುದು ಹಾಗೂ ಜಾಗೃತಿ ಮೂಡಿಸುವ ನಿಟ್ಟಿನಲ್ಲಿ ಸಮುದಾಯವನ್ನು ತೊಡಗಿಸುವುದು
೩. ನಿರ್ದಿಷ್ಟ ಮತಕ್ಷೇತ್ರದಲ್ಲಿ ಸುರಕ್ಷತೆ ಮತ್ತು ಸಬಲೀಕರಣದ ಕಾರ್ಯಸಾಧನೆಗೆ ಸುಸ್ಥಿರ ತಂತ್ರಗಳನ್ನು ರೂಪಿಸುವುದು





## ಬಿ-ಸೇಫ್ ರಾಯಭಾರಿಯಾಗಲು ಈಗಲೇ ಅರ್ಜಿಯನ್ನು ಸಲ್ಲಿಸಿ

ತಮ್ಮ ನೆರೆಯವರ ಸುರಕ್ಷತೆಗೆ ಕೆಲಸ ಮಾಡುತ್ತಿರುವ ನಾಯಕಿಯರ ತಂಡದ ಭಾಗವಾಗಿ

**ಈ ಕಾರ್ಯಕ್ರಮವನ್ನು ಮುಗಿಸಿದ ನಂತರ, ಬಿ-ಸೇಫ್ ರಾಯಭಾರಿಯು:**



ಮಹಿಳಾ ಸುರಕ್ಷತೆಯ ವಿವಿಧ ಆಯಾಮಗಳ ಸಮಗ್ರ ಜಾಗೃತಿ ಹೊಂದುತ್ತಾರೆ


ಕ್ರೌರ್ಯ ಹಾಗೂ ನಿಂದನೆಗೊಳಗಾದ ಸಂತ್ರಸ್ತರಿಗೆ ಬೆಂಬಲವಾಗಿ ನಿಲ್ಲಲು ಸರ್ವರೀತಿಯಲ್ಲಿ ಸಜ್ಜಾಗುತ್ತಾರೆ


ಮಹಿಳಾ ಸುರಕ್ಷತೆಯ ಸಮಸ್ಯೆಗಳ ಕುರಿತು ಧ್ವನಿ ಎತ್ತುವುದು ಮತ್ತು ನಾಯಕತ್ವ ವಹಿಸುವುದು


ಮಹಿಳಾ ಸುರಕ್ಷತೆ ಮತ್ತು ಸಬಲೀಕರಣಕ್ಕೆ ಕಾರಣವಾದ ಸ್ಥಳೀಯ ಪೊಲೀಸರು ಮತ್ತು ಇತರೆ ಸರ್ಕಾರಿ ಅಧಿಕಾರಿಗಳ ಜೊತೆ ಸಂಪರ್ಕ ಸಾಧಿಸುತ್ತಾರೆ


ಮಹಿಳಾ ಸುರಕ್ಷತೆ ಮತ್ತು ಸಬಲೀಕರಣ ಕುರಿತು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸಮರ್ಥರಾಗುತ್ತಾರೆ



# ಕಾರ್ಯಕ್ರಮದ ವಿವರ:

## ಜ್ಞಾನ ಪಥ:

ತರಗತಿಗಳು ನಾಲ್ಕು ವಾರಗಳ ಅವಧಿಯದ್ದಾಗಿರುತ್ತವೆ. ಇಂಗ್ಲೀಷ್ ಹಾಗೂ ಕನ್ನಡ ಭಾಷೆಗಳಲ್ಲಿ ನಿರರ್ಗಳವಾಗಿ ಮಾತನಾಡಬಲ್ಲ ವಿಷಯ ತಜ್ಞರು ಈ ತರಗತಿಗಳನ್ನು ನಿರ್ವಹಿಸುತ್ತಾರೆ.

ಜ್ಞಾನಪಥದ ವಿಸ್ತೃತ ವಿಷಯಕ್ಷೇತ್ರಗಳು:



ಮಹಿಳಾ ಸುರಕ್ಷತೆ ಮತ್ತು ಸಬಲೀಕರಣದ ಪರಿಕಲ್ಪನೆಗಳು




ಕಾನೂನಾತ್ಮಕ ಸಂಪನ್ಮೂಲಗಳು



ಪೊಲೀಸರೊಂದಿಗೆ ಕೆಲಸ



ವಿತ್ತೀಯ ಸಾಕ್ಷರತೆ



ಸಾರ್ವಜನಿಕ ಸ್ಥಳಗಳಲ್ಲಿ ಸುರಕ್ಷತೆ



ಜಾಗೃತಿ ಕಾರ್ಯಕ್ರಮಗಳನ್ನು ನಡೆಸುವಿಕೆ ಕುರಿತು ಜ್ಞಾನ



ಲೈಂಗಿಕ ಅಲ್ಪಸಂಖ್ಯಾತರೊಂದಿಗೆ ಮಿತ್ರತ್ವ



ಸಬಲೀಕರಣ ಕುರಿತಾಗಿರುವ ಸರ್ಕಾರಿ ಯೋಜನೆಗಳು

## ಕ್ಷೇತ್ರಕಾರ್ಯ ಪಥ:


**ತಮ್ಮ ಕ್ಷೇತ್ರಗಳಲ್ಲಿ ಈ ಕೆಳಗಿನ ಕಾರ್ಯಕ್ರಮಗಳನ್ನು ನಡೆಸಲು ಬಿ-ಸೇಫ್ ರಾಯಭಾರಿಗಳು ಸಹಾಯ ಮಾಡುತ್ತಾರೆ:**




ಸುರಕ್ಷಿತ ಮತಕ್ಷೇತ್ರವಾಗಿಸುವ ಸಲುವಾಗಿ ಸಾರ್ವಜನಿಕ ಸ್ಥಳಗಳಲ್ಲಿರುವ ಲೋಪ ಗುರುತಿಸಲು ಸುರಕ್ಷತಾ ನಡಿಗೆಗಳು



ಸುರಕ್ಷತೆ ಮತ್ತು ಮಹಿಳಾ ಸಬಲೀಕರಣ ಕುರಿತು ಜಾಗೃತಿ ಕಾರ್ಯಕ್ರಮಗಳನ್ನು ಆಯೋಜಿಸುವುದು



ತಮ್ಮ ವಾರ್ಡ್ ವ್ಯಾಪ್ತಿಯಲ್ಲಿರುವ ಕಾಲೇಜುಗಳಲ್ಲಿ ಲಿಂಗ ಸಂವೇದನಾ ಕಾರ್ಯಕ್ರಮಗಳನ್ನು ಆಯೋಜಿಸುವುದು



ಆಟೋ ಮತ್ತು ಕ್ಯಾಬ್ ಚಾಲಕರಿಗೆ ಮಹಿಳಾ ಸುರಕ್ಷತೆ ಕುರಿತು ಕಾರ್ಯಕ್ರಮಗಳನ್ನು ನಡೆಸುವುದು.

## ಅರ್ಜಿ ಸಲ್ಲಿಸುವ ವಿಧಾನ



೧. ಅರ್ಜಿ ನಮೂನೆ ತುಂಬುವುದು



೨. ವಿಷಯತಜ್ಞರ ತಂಡದೊಂದಿಗೆ ಚರ್ಚೆ


## ಕಾರ್ಯಕ್ರಮದ ಸಮಯದಲ್ಲಿ




೧. ಕ್ಲಾಸ್‌ರೂಂ ತರಗತಿಗಳಿಗೆ ಹಾಜರಾಗುವುದು



೨. ಪಟ್ಟಿ ಮಾಡಲಾದ ಕ್ಷೇತ್ರಕಾರ್ಯ ಚಟುವಟಿಕೆಗಳನ್ನು ಪೂರ್ಣಗೊಳಿಸುವುದು




**ಕಾರ್ಯಕ್ರಮವನ್ನು ಮುಗಿಸಿದ ನಂತರ, ನಿಮಗೆ ಬಿ-ಸೇಫ್ ರಾಯಭಾರಿ ಪ್ರಮಾಣಪತ್ರ ನೀಡಲಾಗುವುದು ಮತ್ತು ಮಹಿಳಾ ಸುರಕ್ಷತೆ ಮತ್ತು ಸಬಲೀಕಣ ಕುರಿತು ನೀವು ಗಟ್ಟಿ ಧ್ವನಿಯಾಗಿರುವುದನ್ನು ಮುಂದುವರೆಸುತ್ತೀರಿ.**

# ನಿರಂತರವಾಗಿ ಕೇಳಲಾಗುವ ಪ್ರಶ್ನೆಗಳು

**ಪ್ರ:** ಈ ಕಾರ್ಯಕ್ರಮಕ್ಕೆ ಏನಾದರೂ ಶುಲ್ಕವಿದೆಯೇ?
**ಉ:** ಇಲ್ಲ

**ಪ್ರ:** ಈ ಕಾರ್ಯಕ್ರಮವು ಯಾವುದಾದರೂ ವಿಶ್ವವಿದ್ಯಾಲಯ ಅಥವಾ ಸಂಸ್ಥೆಗೆ ಸಂಯೋಜಿತವಾಗಿದೆಯೇ? ಈ ಕಾರ್ಯಕ್ರಮವನ್ನು ಪೂರ್ಣಗೊಳಿಸಿದ ನಂತರ ನನಗೆ ಪ್ರಮಾಣ ಪತ್ರ ನೀಡಲಾಗುತ್ತದೆಯೇ?
**ಉ:** ಈ ಕಾರ್ಯಕ್ರಮವು ಯಾವುದೇ ವಿಶ್ವವಿದ್ಯಾಲಯ ಅಥವಾ ಸಂಸ್ಥೆಗೆ ಸಂಯೋಜಿತವಾಗಿಲ್ಲ. ಪ್ರಾಜೆಕ್ಟ್ ಕಾರ್ಯ ಪೂರ್ಣಗೊಳಿಸುವುದೂ ಸೇರಿದಂತೆ ಈ ಕಾರ್ಯಕ್ರಮದ ಎಲ್ಲಾ ನಿಬಂಧನೆಗಳನ್ನು ಮತ್ತು ಅಗತ್ಯಗಳನ್ನು ಪೂರೈಸಿದ ನಂತರ ಕೋರ್ಸ್ ಪೂರ್ಣಗೊಳಿಸಿದ ಪ್ರಮಾಣಪತ್ರ ನೀಡಲಾಗುವುದು.

**ಪ್ರ:** ಈ ಕಾರ್ಯಕ್ರಮಕ್ಕೆ ನಾನು ಅರ್ಜಿ ಸಲ್ಲಿಸಲು ಏನಾದರೂ ನಿರ್ದಿಷ್ಟ ವಿದ್ಯಾರ್ಹತೆ ಹೊಂದಿರಬೇಕೇ?
**ಉ:** ಯಾವುದೇ ನಿರ್ದಿಷ್ಟ ವಿದ್ಯಾರ್ಹತೆಯ ಅಗತ್ಯವಿಲ್ಲ. ವಿವರಿಸಲಾದ ಎಲ್ಲ ಮಾನದಂಡಗಳನ್ನು ಪೂರೈಸಬಲ್ಲ ಯಾವ ವ್ಯಕ್ತಿಯಾದರೂ ಅರ್ಜಿ ಸಲ್ಲಿಸಬಹುದು.

**ಪ್ರ:** ನಾನು ಬೆಂಗಳೂರು ನಗರದ ನೋಂದಾಯಿತ ಮತದಾರನಲ್ಲದೇ ಇದ್ದರೂ ಈ ಕಾರ್ಯಕ್ರಮಕ್ಕೆ ನಾನು ಅರ್ಜಿ ಸಲ್ಲಿಸಬಹುದೇ?
**ಉ:** ಇಲ್ಲ, ಈ ಕಾರ್ಯಕ್ರಮವು ಬೆಂಗಳೂರಿನಲ್ಲಿ ನೋಂದಾಯಿಸಿದ ಮತದಾರರಿಗೆ ಮಾತ್ರ.

**ಪ್ರ:** ಈ ಕಾರ್ಯಕ್ರಮಕ್ಕೆ ಅರ್ಜಿ ಸಲ್ಲಿಸಲು ವಯೋಮಿತಿ ನಿಗದಿಪಡಿಸಲಾಗಿದಿಯೇ ?
**ಉ:** ಇಲ್ಲ

**ಪ್ರ:** ಈ ಕಾರ್ಯಕ್ರಮವು ಎಲ್ಲಿ ನಡೆಯುತ್ತದೆ?
**ಉ:** ತಮ್ಮ ಮತಕ್ಷೇತ್ರದಲ್ಲಿ ಗುರುತಿಸಲಾದ ಸ್ಥಳವೊಂದರಲ್ಲಿ ನಡೆಸಲಾಗುತ್ತದೆ.

**ಪ್ರ:** ತರಗತಿಗಳ ಸಮಯವೇನು?
**ಉ:** ಶುಕ್ರವಾರ ಬೆಳಿಗ್ಗೆ ೧೦ ರಿಂದ ೧ ಗಂಟೆಯವರೆಗೆ
ಶನಿವಾರ ಬೆಳಿಗ್ಗೆ ೧೦ ರಿಂದ ೧ ಗಂಟೆಯವರೆಗೆ

**ಪ್ರ:** ಮಂಗಳಮುಖಿಯರು ಈ ಕಾರ್ಯಕ್ರಮಕ್ಕೆ ಅರ್ಜಿ ಸಲ್ಲಿಸಬಹುದೇ?
**ಉ:** ಹುಟ್ಟಿನಿಂದಲ್ಲದೆ ಹೆಣ್ಣಾಗಿ ಗುರುತಿಸಿಕೊಳ್ಳುವ ಯಾರಾದರೂ ಈ ಕಾರ್ಯಕ್ರಮಕ್ಕೆ ಅರ್ಜಿ ಸಲ್ಲಿಸಬಹುದು. ಜೊತೆಗೆ, ತಮ್ಮನ್ನು ತಾವು ಅನಿರ್ದಿಷ್ಟ ಹಾಗೂ ಲಿಂಗ ಅನನುಸರಣೆ ಗುಂಪಿನೊಂದಿಗೆ ಗುರುತಿಸಿಕೊಳ್ಳುವವರನ್ನೂ ಮತ್ತು ಮಹಿಳಾ ವಿಷಯಗಳಿಗೆ ಕೆಲಸ ಮಾಡಲು ಬಯಸುವವರನ್ನೂ ನಾವು ಸ್ವಾಗತಿಸುತ್ತೇವೆ.

# ಬಿ-ಸೇಫ್ ಮಹಿಳಾ ರಾಯಭಾರಿಯಾಗಲು ಬೇಕಾದ ಮಾನದಂಡಗಳು

ನೀವು ಈ ಕೆಳಗಿನ ಮಾನದಂಡಗಳನ್ನು ಪೂರೈಸಬಲ್ಲವರಾದರೆ, ದಯವಿಟ್ಟು ಕಾರ್ಯಕ್ರಮಕ್ಕೆ ಅರ್ಜಿ ಸಲ್ಲಿಸಿ

- ಬಿಬಿಎಂಪಿ ಚುನಾವಣೆಗಳಲ್ಲಿ ತಮ್ಮ ವಾರ್ಡ್‌ಗಳಲ್ಲಿ ಮತ ಚಲಾಯಿಸಲು ಅರ್ಹತೆ ಹೊಂದಿರಬೇಕು
- ನಿಮ್ಮ ವಿರುದ್ಧ ಯಾವುದೇ ಕ್ರಿಮಿನಲ್ ಪ್ರಕರಣಗಳು ಇರಬಾರದು ಅಥವಾ ಗಂಭೀರ ಅಪರಾಧಕ್ಕಾಗಿ ನ್ಯಾಯಾಲಯದಲ್ಲಿ ಶಿಕ್ಷೆಗೊಳಪಟ್ಟಿರಬಾರದು
- ಬಡಾವಣೆ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ಅಥವಾ ಸ್ವಸಹಾಯ ಗುಂಪುಗಳ ಭಾಗವಾಗಿರಬೇಕು
- ತಮ್ಮ ವಾರ್ಡ್ ಅನ್ನು ಆದ್ಯತೆಯಾಗಿರಿಸಿಕೊಂಡು, ಮಹಿಳಾ ಸುರಕ್ಷತೆ ಮತ್ತು ಸಬಲೀಕರಣ ಕುರಿತು ಮತ್ತು ವಾರ್ಡ್ ಅಭಿವೃದ್ಧಿಗಾಗಿ ಕೆಲಸ ಮಾಡುವ ಮೂಲಕ ಆಸಕ್ತಿ ತೋರ್ಪಡಿಸುವಿಕೆ.
- ತರಗತಿಗಳಿಗೆ ಹಾಜರಾಗಲು ಮತ್ತು ಯೋಜನೆಗಳನ್ನು ಕಾರ್ಯಗತಗೊಳಿಸಲು ಬೇಕಾದ ಸಮಯವನ್ನು ಅದಕ್ಕೆಂದೇ ಮೀಸಲಿಡುವುದು.
- ಕಾರ್ಯ ಸನ್ನದ್ಧರಾಗಿರಬೇಕು

# ನಮ್ಮ ಬಗ್ಗೆ

ಬಿ.ಪ್ಯಾಕ್
ಅಂದದೂರು ಬೆಂಗಳೂರು

ಬೆಂಗಳೂರು ಪೊಲಿಟಿಕಲ್ ಆಕ್ಷನ್ ಕಮಿಟಿ (ಬಿ.ಪ್ಯಾಕ್) ಒಂದು ಪಕ್ಷಾತೀತ ನಾಗರೀಕರ ಸಂಘವಾಗಿದ್ದು ಬೆಂಗಳೂರಿನಲ್ಲಿ ಆಡಳಿತವನ್ನು ಉತ್ತಮಪಡಿಸುವುದು ಮತ್ತು ಪ್ರತಿಯೊಬ್ಬ ಬೆಂಗಳೂರಿಗರ ಜೀವನದ ಗುಣಮಟ್ಟವನ್ನು ವೃದ್ಧಿಸುವ ಗುರಿಯನ್ನು ಹೊಂದಿದೆ. ಬಿ.ಪ್ಯಾಕ್ ನಿರ್ದಿಷ್ಟವಾಗಿ ಉತ್ತಮ ಆಡಳಿತ ಪದ್ಧತಿ, ಸರ್ಕಾರದ ಎಲ್ಲ ಅಂಗಗಳಲ್ಲಿ ಸಮಗ್ರತೆ ಮತ್ತು ಪಾರದರ್ಶಕತೆಯನ್ನು ತರುವುದು, ನಗರದಲ್ಲಿ ಮೂಲಭೂತ ಸೌಕರ್ಯದ ಗುಣಮಟ್ಟವನ್ನು ವೃದ್ಧಿಸುವುದನ್ನು ಗುರಿಯಾಗಿರಿಸಿಕೊಂಡಿದೆ.

ಬಿ.ಪ್ಯಾಕ್ ಬಿ.ಸೇಫ್
ಮಹಿಳಾ ಮತ್ತು ಮಕ್ಕಳ ಸುರಕ್ಷತೆ

ಬಿ-ಸೇಫ್ ಒಂದು ಪರಿಪೂರ್ಣ ಕಾರ್ಯಕ್ರಮವಾಗಿದ್ದು, ಮಹಿಳೆಯರು ಮತ್ತು ಮಕ್ಕಳ ಹಕ್ಕುಗಳ ಪ್ರತಿಪಾದನೆಗೆ ಎಲ್ಲ ಪಾಲುದಾರರನ್ನು ತೊಡಗಿಸುವುದು ಮತ್ತು ಇದೇ ಉದ್ದೇಶಕ್ಕಾಗಿ ಸಂವೇದನೆ ಮೂಡಿಸುವ ಹಾಗೂ ಸಮುದಾಯವನ್ನು/ ಬಹುಜನರನ್ನು ತೊಡಗಿಸುವ ಬದ್ಧತೆಯನ್ನು ಹೊಂದಿದೆ.



## ಸೇಫ್ ಶಾಲೆ

ಆರು ಮತಕ್ಷೇತ್ರಗಳ ೧೫೦ ಶಾಲೆಗಳಲ್ಲಿ ಸುರಕ್ಷತೆ ಕುರಿತು ಶಿಕ್ಷಕರ ಸಾಮರ್ಥ್ಯ ವೃದ್ಧಿಸುವುದು

೩೭೦೦+ ಮಕ್ಕಳಿಗೆ ಸುರಕ್ಷತಾ ಕಾರ್ಯಾಗಾರಗಳು

ನಾಲ್ಕು ಮತಕ್ಷೇತ್ರಗಳ ಶಾಲೆಗಳು  ಬಿಬಿಎಂಪಿ ಶಾಲೆಗಳು ಮತ್ತು ಅಂಗನವಾಡಿಗಳ ಲೋಪಗಳ ವಿಶ್ಲೇಷಣೆ



## ಸೇಫ್ ಕೆಲಸದ ಸ್ಥಳ

ಐಸಿಸಿಯ ೫೦+ ಬಾಹ್ಯ ಸದಸ್ಯರಿಗೆ ಸಾಮರ್ಥ್ಯ ವೃದ್ಧಿಸುವಿಕೆ

ಬೆಂಗಳೂರಿಗೆ ಸ್ಥಳೀಯ ದೂರು ಸಮಿತಿ ಸ್ಥಾಪನೆಗೆ ಒತ್ತುನೀಡಿಕೆ




## ಸೇಫ್ ಸಾರ್ವಜನಿಕ

೧೧ ಸಾವಿರ ಬಿಎಂಟಿಸಿ ಚಾಲಕರು ಮತ್ತು ನಿರ್ವಾಹಕರಿಗೆ ೧೧೦ ಜೆಂಡರ್ ಸಂವೇದನಾ ಕಾರ್ಯಾಗಾರಗಳು

ಬಿಎಂಟಿಸಿ ಘಟಕಗಳಲ್ಲಿ ಮಹಿಳೆಯರಿಗೆಂದೇ ೧೨ ವಿಶೇಷ ವಿಶ್ರಾಂತಿ ಕೋಣೆಗಳು

ಬೆಂಗಳೂರಿನ ಎಲ್ಲಾ ೧೯೮ ವಾರ್ಡ್‌ಗಳ ಸಾರ್ವಜನಿಕ ಸ್ಥಳಗಳ ಸುರಕ್ಷತೆಯ ತನಿಖಾ ವರದಿ.

## B.PAC Values




## B.PAC Contact details:

**Office address:**
#4/6, Ground Floor, High grounds, Millers Road opp. to Vikram Hospital, Bangalore - 560052

**Tel:** +91-080 41521797 | **Email:** forbangalore@bpac.in

www.bpac.in | @BPACOfficial | bpacofficial | @BPACOfficial | BPACofficial | BPACofficial